ಶ್ರೀ ಗೋವಿಂದ ಎಂ.ಕಾರಜೋಳ
(ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಬಂದಿದೆ.

ಪ್ರಾದೇಶಿಕ ಮಟ್ಟದಲ್ಲಿ ನಾಲ್ಕು ಸುವರ್ಣ ಕರ್ನಾಟಕ ಭವನಗಳನ್ನು ನಿರ್ಮಿಸಲು ತಾತ್ವಿಕ ಅನುಮೋದನೆ ನೀಡಿ ರೂ.5.00 ಕೋಟಿ ಒದಗಿಸಿದ್ದು, ಪ್ರತಿಯೊಂದು ಭವನಕ್ಕೆ ರೂ.1.25 ಕೋಟಿಗಳಂತೆ ಒಟ್ಟು ರೂ.5.00 ಕೋಟಿಗಳನ್ನು ನಿಗದಿಪಡಿಸಿ ಬಿಡುಗಡೆ ಮಾಡಲಾಗಿರುತ್ತದೆ. ಹಾಗೆಯೇ ಸೇಡಂ ಸುವರ್ಣ ಕನ್ನಡ ಭವನ ನಿರ್ಮಾಣವನ್ನು ರೂ.1.25 ಕೋಟಿ ಅನುದಾನದಲ್ಲಿ ಮಾಡಬೇಕೆಂದು ಸರ್ಕಾರ ಷರತ್ತು ವಿಧಿಸಿದೆ.

ಆ) ಹೆಚ್ಚುವರಿ ಅನುದಾನ ಬಿಡುಗಡೆ ಬಗ್ಗೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

A.I.B.P. ಯ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನ ಬಳಕೆಯ ಬಗ್ಗೆ
132 : (274)

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಅ) ಭಾಲ್ಕಿ ತಾಲ್ಲೂಕಿನಲ್ಲಿ AIBP ಕಾರಂಜಿ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವನ್ನು ಇದುವರೆವಿಗೂ ಬಳಕೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) AIBP ಯೋಜನೆಯಡಿಯಲ್ಲಿ ಅನುದಾನವನ್ನು ಸದುಪಯೋಗ ಮಾಡಿಕೊಳ್ಳುವಲ್ಲಿ ವಿಫಲವಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಶಿಸ್ತು ಕ್ರಮ ಜರುಗಿಸಿದೆ.

ಇ) ಕಾರಂಜಾ ಯೋಜನೆಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಬೇಕಾಗಿರುವ ಕಾಲ ಎಷ್ಟು; ಇದರ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಸವರಾಜ ಬೊಮ್ಮಾಯಿ
(ಜಲಸಂಪನ್ಮೂಲ ಸಚಿವರು)

ಅ) ಕಾರಂಜಾ ಯೋಜನೆಗೆ ಎ.ಐ.ಬಿ.ಪಿ. ಅಡಿಯಲ್ಲಿ ಬಿಡುಗಡೆಯಾದ ಅನುದಾನವನ್ನು ಬಳಕೆ ಮಾಡಲಾಗುತ್ತಿದ್ದು, 2011–12ನೇ ಸಾಲಿನಲ್ಲಿ ಬಳಕೆ ಮಾಡುವಲ್ಲಿ ಅಡಚಣೆ ಆಗಿರುತ್ತದೆ.

ಆ) ಮಾರ್ಚ್–2012ರ ಅಂತ್ಯದಲ್ಲಿ ರಾಜ್ಯ ಸರ್ಕಾರದಿಂದ ಎ.ಐ.ಬಿ.ಪಿ. ಅಡಿಯಲ್ಲಿ ಬಿಡುಗಡೆಯಾದ ರೂ.1746 ಲಕ್ಷ ಮೊತ್ತದ ಪೈಕಿ ಕಾರ್ಯಪಾಲಕ ಅಭಿಯಂತರರು, ಸಂ.2, ಬಾಲ್ಕಿ ವಿಭಾಗಕ್ಕೆ ಬಿಡುಗಡೆ ಮಾಡಿದ್ದ ರೂ.200 ಲಕ್ಷಗಳ ಪೈಕಿ ಯಾವುದೇ ವೆಚ್ಚವಾಗಿರುವುದಿಲ್ಲ. ಈ ವಿಷಯವನ್ನು ಪರಿಶೀಲಿಸಲಾಗಿ, ಖಜಾನೆಗೆ ಭಾಲ್ಕಿ ವಿಭಾಗದಿಂದ ಬಿಲ್ಲುಗಳನ್ನು ಸಕಾಲದಲ್ಲಿ ಸಲ್ಲಿಸಿದ್ದರೂ ಸಹ ಖಜಾನೆಯ ಗಣಕ ಯಂತ್ರದಲ್ಲಿ The Head of Account not in the Budget ಎಂದು Display ಬಂದ ಕಾರಣದಿಂದ ಹಣ ಪಾವತಿಯಾಗದೇ ಇರುತ್ತದೆ. ಬಳಕೆಯಾಗದಿದ್ದ ಅನುದಾನವನ್ನು ಪುನಃ ಸರ್ಕಾರವು ಜುಲೈ–2012 ರಲ್ಲಿ ಬಿಡುಗಡೆ ಮಾಡಿರುತ್ತದೆ.

ಇ) ಕಾರಂಜಾ ಯೋಜನೆಯನ್ನು ತ್ವರಿತ ಗತಿಯಲ್ಲಿ ಮಾರ್ಚ್–2014 ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಎಐಬಿಪಿ ರಡಿ ಸಹಾಯಧನ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಲು ಕಾರಂಜಾ ಯೋಜನೆಯ ಇತ್ತೀಚಿನ ಹಂತದ ರೂ.632.00 ಕೋಟಿ ಮೊತ್ತದ ಪರಿಷ್ಕೃತ ಅಂದಾಜನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿದ್ದು, ಕೆಲವು ಆಕ್ಷೇಪಣೆಗೆ ಹೆಚ್ಚುವರಿ ಮಾಹಿತಿ ವಿವರಗಳನ್ನು ಒದಗಿಸಲಾಗಿದ್ದು ಅನುಮೋದನೆ ನಿರೀಕ್ಷಿಸಲಾಗಿದೆ. ಬಹುತೇಕ ಎಲ್ಲ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ವಹಿಸಿ ಕೊಡಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.